# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1140 (1383)

ಉತ್ತರಿಸಬೇಕಾದ ದಿನಾಂಕ : 22.08.2025

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ್ ಮಿಷನ್ ಹಾಗೂ ಹರ್ ಘರ್ ಜಲ ಯೋಜನೆಯು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು: ಹಾಗೂ ಯೋಜನೆಯ ಉದ್ದೇಶವೇನು: ಹಾಗೂ ಯಾವ ಕಾಲಮಿತಿಯೊಳಗೆ ಸದರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯು ಕೇಂದ್ರ ಸರ್ಕಾರದಿಂದ 15 ಆಗಸ್ಟ್ 2019 ರಂದು ಜಾರಿಗೆ ಬಂದಿದ್ದು, ಸದರಿ ಕಾರ್ಯಕ್ರಮದಡಿ 2024ರೊಳಗಾಗಿ ರಾಜ್ಯದ ಎಲ್ಲಾ ಗ್ರಾಮೀಣ ಮನೆಗಳಿಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಸಮುದಾಯದ ಸಹಭಾಗಿತ್ವದೊಂದಿಗೆ ಒದಗಿಸುವ ಉದ್ದೇಶ ಹೊಂದಲಾಗಿದೆ.<br>ಕೇಂದ್ರ ಸರ್ಕಾರದ 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಜಲ ಜೀವನ್ ಮಿಷನ್ ಯೋಜನೆಯನ್ನು 2028ರವರೆಗೆ ವಿಸ್ತರಿಸಲಾಗಿರುತ್ತದೆ.<br>ಹರ್ ಘರ್ ಜಲ್ ಎನ್ನುವುದು ಯೋಜನೆಯು ಪೂರ್ಣಗೊಂಡಿರುವುದನ್ನು ಘೋಷಿಸುವ ಪ್ರಕ್ರಿಯೆಯಾಗಿದ್ದು, ಅಕ್ಟೋಬರ್-2021 ರಂದು ಪ್ರಾರಂಭಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಶೇ.100ರಷ್ಟು ನಳ ಸಂಪರ್ಕ ಹೊಂದಿರುವ ಗ್ರಾಮಗಳನ್ನು ಹರ್ ಘರ್ ಜಲ್ ಎಂದು ಗ್ರಾಮಮಟ್ಟದ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC) ರವರಿಂದ ಘೋಷಿಸಲಾಗುತ್ತದೆ. |

| | | |
|---|---|---|
| ಆ) | ಈ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು: (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನದ ವರ್ಷವಾರು ಮಾಹಿತಿ **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಇ) | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಸರ್ಕಾರವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಗ್ರಾಕುನೀ&ನೈ ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.<br>1. ರಾಜ್ಯವು ದೇಶದ 2ನೇ ಅತೀ ಶುಷ್ಕ ಪ್ರದೇಶವಾಗಿದ್ದು, ಸುಸ್ಥಿರ ಜಲಮೂಲವನ್ನು ಗುರುತಿಸಲು ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳಲಾಗಿದೆ.<br>2. ಬಹುಗ್ರಾಮ ಕುಡಿಯುವ ನೀರಿನ ಮೇಲೆ ಅವಲಂಬಿತವಾಗಿರುವ ಏಕ ಗ್ರಾಮ ಯೋಜನೆಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಬಹುಗ್ರಾಮ ಯೋಜನೆ ಪೂರ್ಣಗೊಳ್ಳುವರೆಗೆ ಹಾಲಿ ಲಭ್ಯವಿರುವ ಸ್ಥಳೀಯ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ.<br>3. ಯೋಜನೆಯ ಗಾತ್ರಗಳಿಗೆ ಅನುಗುಣವಾಗಿ ಏಕ ಗ್ರಾಮ ಯೋಜನೆ (SVS)ಗಳಿಗೆ 6 ರಿಂದ 9 ತಿಂಗಳುಗಳಷ್ಟು ಹಾಗೂ ಬಹುಗ್ರಾಮ ಯೋಜನೆ (MVS)ಗಳಿಗೆ 11 ರಿಂದ 36 ತಿಂಗಳುಗಳಷ್ಟು ಅನುಷ್ಠಾನ ಸಮಯ ನಿಗದಿ ಪಡಿಸಲಾಗಿರುತ್ತದೆ. ಸದರಿ ಯೋಜನೆಗಳ ಅನುಷ್ಠಾನದಲ್ಲಿ ನಿವೇಶನ/ಜಾಗಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಇಲಾಖೆ/ ಪ್ರಾಧಿಕಾರ / ಖಾಸಗಿ ವ್ಯಕ್ತಿಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಆದುದರಿಂದ ಹೆಚ್ಚಿನ ಸಮಯಾವಾಕಾಶ ತೆಗೆದುಕೊಳ್ಳಲಾಗುತ್ತಿದೆ.<br>4. ಅರಣ್ಯ ಇಲಾಖೆಯ ಜಾಗಗಳನ್ನು (ಸಂರಕ್ಷಿತ ಅರಣ್ಯ ವಲಯ, ಸಾಮಾಜಿಕ ಅರಣ್ಯ ವಲಯ, |

| | | |
|---|---|---|
| | | ವನ್ಯ ಜೀವಿ ಅರಣ್ಯ ವಲಯ) ಪಡೆಯಲು ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮತಿ ಪಡೆಯುವ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.<br>5. ರೈಲ್ವೇ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸ್ವತ್ತುಗಳ, ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯಬೇಕಿರುತ್ತದೆ.<br>6. ಜಾಕ್ ವೆಲ್ ನಿರ್ಮಾಣ ಸ್ಥಳಗಳ ತೀರುವಳಿಗೆ ಸಂಬಂಧಿಸಿದ ನಿಗಮ / ಇಲಾಖೆಗಳಿಂದ ಸಹಮತಿ ಪಡೆಯುವುದು.<br>7. ಖಾಸಗಿ ನಿವೇಶನಗಳನ್ನು ಗುತ್ತಿಗೆದಾರರು ಖರೀದಿಸಬೇಕಾಗಿರುವುದು ಹಾಗೂ ಸಂಬಂಧಿತ ಹಕ್ಕು ದಾಖಲೆ ಪಡೆಯಲು ವಿಳಂಬ. |
| ಈ) | ಜೆ.ಜೆ.ಎಂ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಉಪಗುತ್ತಿಗೆ ನೀಡಲು ಅವಕಾಶ ಕಲ್ಪಿಸಿರುವುದಿಲ್ಲವಾದರೂ, ಉಪಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲ. ಉಪಗುತ್ತಿಗೆ ನೀಡಿರುವವರ ವಿರುದ್ಧ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯಡಿ 2 ಭಾಗಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು DBOT ಆಧಾರದ ಮೇಲೆ, ಸಗಟು ನೀರು ಸರಬರಾಜಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು,<br>2) ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಐಟಂ ದರಗಳ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗುತ್ತಿದೆ.<br>ಅ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ DBOT ಆಧಾರದಲ್ಲಿ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಟೆಂಡರ್ ನಲ್ಲಿಯೇ Electrical ಮತ್ತು SCADA ಘಟಕಗಳಿಗೆ ಉಪಗುತ್ತಿಗೆಯನ್ನು ನೀಡಲು ಅವಕಾಶ ಕಲ್ಪಿಸಲಾಗಿದ್ದು, ಉಪಗುತ್ತಿಗೆದಾರರ ಮಾಹಿತಿಯನ್ನು ಪರಿಶೀಲಿಸಿ ಟೆಂಡರ್ ಅನ್ನು |

| | | |
|---|---|---|
| | | ಅನುಮೋದಿಸಲಾಗುತ್ತಿದೆ.<br>ಆ) ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಕಾಮಗಾರಿಗಳನ್ನು ಐಟಂ ದರಗಳ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಈ ಕಾಮಗಾರಿಗಳಲ್ಲಿ ಯಾವುದೇ ಉಪಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.<br>ಆದಾಗ್ಯೂ, ಉಪಗುತ್ತಿಗೆ ನೀಡಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗ, ಅಂತಹ ಗುತ್ತಿಗೆದಾರರ ವಿರುದ್ಧ ಗುತ್ತಿಗೆಯನ್ನು ರದ್ದುಪಡಿಸುವುದು, ಕಪ್ಪುಪಟ್ಟಿಗೆ ಸೇರಿಸುವುದು ಮತ್ತು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತಿದೆ. |
| ಉ) | ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳುವಾಗ ಅಗತ್ಯ ಅಂಶಗಳನ್ನು ಪಾಲಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕುರಿತು ಸರ್ಕಾರ ಆದೇಶಿಸಿದ್ದರೂ ಸಹ ಅಗತ್ಯ ಅಂಶಗಳನ್ನು ಪಾಲಿಸದೇ ಮತ್ತು ಕಳಪೆ ಕಾಮಗಾರಿಯನ್ನು ಮಾಡಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯಡಿ ಕಳಪೆ ಕಾಮಗಾರಿಯನ್ನು ಮಾಡಿರುವವರ ವಿರುದ್ಧ ತೆಗೆದುಕೊಂಡ ಕ್ರಮದ ವಿವರಗಳನ್ನು **ಅನುಬಂಧ-02 ರಲ್ಲಿ** ಲಗತ್ತಿಸಿದೆ. |

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/ 26 /2025-26

(**ಪ್ರಿಯಾಂಕ್ ಖರ್ಗೆ**),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ-1

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಜಲ ಜೀವನ್ ಮಿಷನ್ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನದ ವರ್ಷವಾರು ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಹಂಚಿಕೆ | | | ಬಿಡುಗಡೆಯಾದ ಅನುದಾನ | | |
|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 1 | 2019-20 | 54605.62 | 35394.38 | **90000.00** | 54605.62 | 33301.20 | **87906.82** |
| 2 | 2020-21 | 118940.49 | 56617.25 | **175557.74** | 44635.61 | 56617.25 | **101252.86** |
| 3 | 2021-22 | 500879.61 | 334544.68 | **835424.29** | 250439.80 | 334544.68 | **584984.48** |
| 4 | 2022-23 | 545185.00 | 491449.07 | **1036634.07** | 272592.52 | 491448.92 | **764041.44** |
| 5 | 2023-24 | 1262337.04 | 630973.24 | **1893310.28** | 496662.00 | 630973.24 | **1127635.24** |
| 6 | 2024-25 | 380441.30 | 760299.99 | **1140741.29** | 57066.15 | 760299.00 | **817365.15** |
| 7 | 2025-26 | 500000.00 | 605000.00 | **1105000.00** | 0.00 | 150000.00 | **150000.00** |
| | ಒಟ್ಟು | **3362389.06** | **2914278.61** | **6276667.67** | **1176001.70** | **2457184.29** | **3633185.99** |

CAO
RDWSD

# ಅನುಬಂಧ - 2

| ಕ್ರ.ಸಂ. | ದೂರಿನ ವಿಷಯ | ಕೈಗೊಂಡ ಕ್ರಮ |
|---|---|---|
| 1 | ಶಿವಮೊಗ್ಗ ತಾಲ್ಲೂಕಿನ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ನಿರ್ವಹಿಸಿರುವ ಕಾಮಗಾರಿಗಳು ಕಳಪೆಯಾಗಿರುವ ಬಗ್ಗೆ. | ಪ್ರಕರಣದಲ್ಲಿನ ಆಪಾದಿತರಾದ ಶ್ರೀ ಎಸ್. ಬಿ.ಕೊಟ್ರೇಶ್, ಸ.ಕಾ.ಇಂ. ಮತ್ತು ಶ್ರೀ ಶೇಖರ್ ನಾಯ್ಕ, ಸ.ಇಂ. ಇವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿರುತ್ತದೆ. |
| 2 | ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನಲ್ಲಿ 2020-215 ಸಾಲಿನಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವ ಬಗ್ಗೆ | 1. ಶ್ರೀ ಬಸನಗೌಡ ಮೇಟಿ ಪಾಟೀಲ್, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ. ವಿಭಾಗ, ಕೊಪ್ಪಳ.<br><br>2. ಶ್ರೀ ವಿಲಾಸ್ ಭೋಸ್ಲೆ, ಸ.ಕಾ.ಇಂ., ಗ್ರಾ.ಕು.ನೀ.&ನೈ. ಉಪ ವಿಭಾಗ, ಕುಷ್ಟಗಿ.<br>ಇವರುಗಳನ್ನು ಸೇವೆಯಿಂದ ಅಮಾನತ್ತು ಮಾಡಲಾಗಿರುತ್ತದೆ. |
| 3 | ಯಾದಗಿರಿ ಜಿಲ್ಲೆಯಲ್ಲಿ (ವಿಶೇಷವಾಗಿ ಗುರುಮಿಠಕಲ್ ತಾಲ್ಲೂಕಿನಲ್ಲಿ) ಕೈಗೊಂಡ ಕುಡಿಯುವ ನೀರಿನ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪದ ಆರೋಪ | ಶ್ರೀ ಸತೀಶ್ ಗುದಿಗೆನವರ್, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ. ವಿಭಾಗ, ಯಾದಗಿರಿ ಇವರನ್ನು ಸೇವೆಯಿಂದ ಅಮಾನತ್ತು ಮಾಡಲಾಗಿರುತ್ತದೆ. |

ಉಪ ಕಾರ್ಯದರ್ಶಿ (ಆಡಳಿತ)
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ಇಲಾಖೆ, ಬೆಂಗಳೂರು